ಕರ್ನಾಟಕ ವಿಧಾನ ಸಭೆ

477 ಶ್ರೀ ರೋಷನ್ ಬೇಗ್ ಆರ್.(ಶಿವಾಜಿನಗರ)

ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

ಅ) ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಅತೀವ ಕೊರತೆಯಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗೊಂಡ ಕ್ರಮವೇನು;

ಹೌದು,

ನೀರಿನ ಕೊರತೆ ನೀಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಸರಾಸರಿ ಪ್ರತಿದಿನ 80 ದಶಲಕ್ಷ ಲೀಟರ್ ನೀರನ್ನು ಹೆಚ್ಚುವರಿಯಾಗಿ ಪಂಪ್ ಮಾಡಿ ನಗರಕ್ಕೆ ಸರಬರಾಜು ಮಾಡಲಾಗಿದೆ.
2) ತ್ವರಿತ ಪರಿಹಾರವಾಗಿ 1390 ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆದು ಅವುಗಳಿಂದ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.
3) ಇದೇ ರೀತಿ ಮತ್ತಷ್ಟು ನೀರು ಸರಬರಾಜು ಮಾಡಲು 1000 ಕೊಳವೆ ಬಾವಿಗಳನ್ನು ಕೊರೆಯಲು ದರಖಾಸ್ತು ಪ್ರಕ್ರಿಯೆ ಪ್ರಗತಿಯಲ್ಲಿದೆ.

ಆ) ಕಾವೇರಿ 2ನೇ ಹಂತದ ಯೋಜನೆ ಯಾವಾಗ ಪೂರ್ಣಗೊಳ್ಳುತ್ತದೆ.

ಕಾವೇರಿ 4ನೇ ಹಂತದ 2ನೇ ಘಟ್ಟದ ನೀರು ಸರಬರಾಜು ಯೋಜನೆಯು 2011–12ರಲ್ಲಿ ಪೂರ್ಣಗೊಳ್ಳಲಿದೆ ಹಾಗೂ ಒಳಚರಂಡಿ ಕೆಲಸಗಳು 2012–13ರ ಹೊತ್ತಿಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಇ) ಜಪಾನೀಸ್ ಬ್ಯಾಂಕ್ ಫಾರ್ ಇಂಟರ್ ನ್ಯಾಷನಲ್ ಕೋ–ಅಪರೇಷನ್ ಸಂಸ್ಥೆಯಿಂದ ಈ ಯೋಜನೆಗೆ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ.? (ಪೂರ್ಣ ವಿವರಗಳನ್ನು ಒದಗಿಸುವುದು)

ಕಾವೇರಿ 4ನೇ ಹಂತದ 2ನೇ ಘಟ್ಟದ ನೀರು ಸರಬರಾಜು ಯೋಜನೆಗೆ ಜಪಾನ್ ಇಂಟರ್ ನ್ಯಾಷನಲ್ ಕೋ–ಆಪರೇಶನ್ ಸಂಸ್ಥೆಯು ನೀರು ಸರಬರಾಜು ವಿಭಾಗಕ್ಕೆ ರೂ.1750 ಕೋಟಿ ಹಾಗೂ ಕೊಳಚೆ ನೀರು ಮತ್ತು ವಿತರಣಾ ಸುಧಾರಣೆ ಕಾರ್ಯಕ್ರಮಗಳಿಗೆ ರೂ. 1080ಕೋಟಿಗಳ ನೆರವು ಒದಗಿಸಿದೆ. ಈ ಸಂಬಂಧವಾಗಿ ಭಾರತ ಸರ್ಕಾರ ಹಾಗೂ ಜಪಾನಿನ ಸರ್ಕಾರ ದಿನಾಂಕ 31.03.2005 ಮತ್ತು 31.03.2006 ರಂದು ಒಪ್ಪಂದಕ್ಕೆ ಸಹಿ ಹಾಕಿವೆ. ಈ ಹಣಕಾಸಿನ ನೆರವಿನ ಅವಧಿ 10 ವರ್ಷಗಳಾಗಿರುತ್ತದೆ.

ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ
ಮತ್ತು ಜೈವಿಕ ತಂತ್ರಜ್ಞಾನ ಹಾಗೂ
ಬೆಂಗಳೂರು ಜಲಮಂಡಳಿ ಸಚಿವರು.

ಕರ್ನಾಟಕ ವಿಧಾನಸಭೆ

13ನೇ ವಿಧಾನಸಭೆ 3ನೇ ಅಧಿವೇಶನ

478 ಶ್ರೀ ರೋಷನ್ ಬೇಗ್. ಆರ್.

ಮಾನ್ಯ ಲೋಕೋಪಯೋಗಿ ಸಚಿವರು

ಅ) ಬೆಂಗಳೂರು ನಗರದಿಂದ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಎಲಿವೇಟೆಡ್ ಎಕ್ಸ್‌ಪ್ರೆಸ್ ಹೈವೇ ನಿರ್ಮಾಣ ಯೋಜನೆ ಸರ್ಕಾರದ ಮುಂದಿದೆಯೆ;

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ನಗರದ ಹೆಬ್ಬಾಳದಿಂದ–ಯಲಹಂಕ ಬೈಪಾಸ್‌ವರೆಗೆ ಅಮದರೆ ಕಿಮೀ. 556.84ರಿಂದ 552.9ರವರೆಗೆ ಎಲಿವೇಟೆಡ್ ಎಕ್ಸ್‌ಪ್ರೆಸ್ ಹೈವೇ ನಿರ್ಮಾಣ ಮಾಡಲು ಪ್ರಸ್ತಾವನೆಯನ್ನು ಕೇಂದ್ರ ಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ.

ಆ) ಹಾಗಿದ್ದಲ್ಲಿ, ಈ ಯೋಜನೆ ಯಾವಾಗ ಪ್ರಾರಂಭವಾಗುವುದು (ಪೂರ್ಣ ಮಾಹಿತಿಯನ್ನು ಒದಗಿಸುವುದು)?

ಈ ಕಾಮಗಾರಿಯನ್ನು ಕೇಂದ್ರ ಸಾರಿಗೆ ಮಂತ್ರಾಲಯದಿಂದ ಅನುಮೋದನೆ ದೊರೆತ ಕೂಡಲೇ ಪ್ರಾರಂಭಿಸಲಾಗುವುದು.

ಸಂಖ್ಯೆ:ಲೋಇ 122 ಸಿಎನ್‌ಹೆಚ್ 2009

ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನ ಸಭೆ

481 ಶ್ರೀ ಮಂಜು ಎ.(ಅರಕಲಗೂಡು)

ಮಾನ್ಯ ಮುಖ್ಯಮಂತ್ರಿಯವರು

ಅ) ನಾಮ ನಿರ್ದೇಶನ ಮಾಡುವ ಸಂದರ್ಭದಲ್ಲಿ ಶಾಸಕರ ಬಳಿ ಪತ್ರ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಹೌದು

ಆ) ಹಾಗಿದ್ದಲ್ಲಿ ಶಾಸಕರು ತಿಳಿಸುವ ವ್ಯಕ್ತಿಗಳನ್ನು ನಾಮ ನಿರ್ದೇಶನ ಮಾಡುತ್ತಿಲ್ಲದಿರುವುದಕ್ಕೆ ಕಾರಣಗಳೇನು?

ಮಾನ್ಯ ಶಾಸಕರ ಶಿಫಾರಸ್ಸುಗಳು ಮತ್ತು ಇತರೆ ವ್ಯಕ್ತಿಗಳು, ಸಂಸ್ಥೆಗಳು ಹಾಗೂ ಇಲಾಖೆಯಿಂದ ಬಂದಿರಬಹುದಾದ ಮನವಿ/ಶಿಫಾರಸ್ಸುಗಳನ್ನು ಪರಿಗಣಿಸಿ, ಸೂಕ್ತ ವ್ಯಕ್ತಿಗಳನ್ನು ನಾಮ ನಿರ್ದೇಶನ ಮಾಡಲಾಗುತ್ತಿದೆ.

ಸಂಖ್ಯೆ:ಸಿ.ಎಂ./01/ನಾನಿ/2009